ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ – ೦೧**

# ಕರ್ನಾಟಕ ವಿಧಾನಸಭೆ

## ಹದಿನಾಲ್ಕನೇ ವಿಧಾನಸಭೆ

## ಹದಿನಾಲ್ಕನೇ ಅಧಿವೇಶನ

**ಸೋಮವಾರ, ದಿನಾಂಕ ೧೫ನೇ ಜೂನ್, ೨೦೧೭**

---

## ಸಮೂಹ – 'ಅ–A'

೧. ಮಾನ್ಯ ಅರಣ್ಯ ಸಚಿವರು

೨. ಮಾನ್ಯ ಕಂದಾಯ ಸಚಿವರು

೩. ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು

೫. ಮಾನ್ಯ ಕಾರ್ಮಿಕ ಸಚಿವರು

೬. ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು

೭. ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

---

## ನೀರಾವರಿ ಯೋಜನೆಗಳು

**ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) –**

೧ (೩೯೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಿಂದ ಜಲಸಂಪನ್ಮೂಲ ಇಲಾಖೆಯಿಂದ ಇಂಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿ, ಲೆಕ್ಕಶೀರ್ಷಿಕೆಯಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು ; (ಎಲ್ಲಾ ಯೋಜನೆಗಳ ರೂಪುರೇಷೆಗಳ ವಿವರ ನೀಡುವುದು)

(ಆ) ಈ ಯೋಜನೆಗಳಿಗೆ ಸರ್ಕಾರದ ವತಿಯಿಂದ ಮಂಜೂರಾದ ಅನುದಾನ ಎಷ್ಟು ; ಸದರಿ ಯೋಜನೆಗಳು ಪ್ರಸ್ತುತ ಯಾವ ಹಂತದಲ್ಲಿವೆ ; (ಪ್ರತ್ಯೇಕ ವಿವರ ನೀಡುವುದು)

(ಇ) ಸದರಿ ಯೋಜನೆಗಳಿಗೆ ಇದುವರೆಗೂ ಬಿಡುಗಡೆಯಾದ ಅನುದಾನ ಎಷ್ಟು ; ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ;

(ಈ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಇಂಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರ ತೀರ್ಮಾನಿಸಿದೆ ; ಅದರ ರೂಪುರೇಷೆಗಳೇನು ? (ವಿವರ ನೀಡುವುದು)

## ಕಳಪೆ ಮೇವು ಪೂರೈಕೆ

**ಡಾ|| ರಫೀಕ್ ಅಹ್ಮದ್ ಎಸ್. (ತುಮಕೂರು ನಗರ) –**

೨ (೧೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅದರಲ್ಲೂ ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ತೀವ್ರ ಬರಗಾಲ ಉಂಟಾಗಿ ಮೇವು ಇಲ್ಲದೆ ಜಾನುವಾರುಗಳು ಸಾವಿಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರ ತೆರೆದಿರುವ ಗೋಶಾಲೆಗಳಲ್ಲಿ ಹೆಚ್ಚು ವಾಸನೆ ಹಾಗೂ ಧೂಳು ತುಂಬಿಕೊಂಡಿರುವ ಕಳಪೆ ಮೇವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ಮಾಹಿತಿ ನೀಡುವುದು)

## ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿ ಮಂಜೂರಾದ ಕೊಳವೆ ಬಾವಿಗಳು

**ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) –**

೩ (೫೫೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಡಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಕೊರೆದಿರುವ ಮತ್ತು ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಈ ಯೋಜನೆಯಡಿ ಕೊರೆಯಲಾದ ಎಷ್ಟು ಕೊಳವೆ ಬಾವಿಗಳು ಸಫಲವಾಗಿವೆ ಮತ್ತು ವಿಫಲವಾಗಿವೆ ; ವಿಫಲಗೊಂಡಿರುವ ಕೊಳವೆ ಬಾವಿಗಳ ಬದಲಿಗೆ ಹೊಸ ಕೊಳವೆ ಬಾವಿ ಕೊರೆಯಲಾಗಿದೆಯೇ ? (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

## ರಸ್ತೆ ಅಭಿವೃದ್ಧಿ

**ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು) –**

೪ (೫೫೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲಿಂಗಸುಗೂರು ಕ್ಷೇತ್ರದ ಬಹುದೊಡ್ಡ ರಾಂಪೂರ ಏತ ನೀರಾವರಿ ಯೋಜನಾ ವ್ಯಾಪ್ತಿಯ ಕಮಲದಿನ್ನಿ, ನವಲಿ, ರಾಂಪೂರ, ಜೂಲಗುಡ್ಡ, ಹನುಮಗುಡ್ಡ, ಖೈರವಾಡಗಿ ಗ್ರಾಮಗಳನ್ನು ಒಳಗೊಂಡಿರುವ ರಸ್ತೆಯಲ್ಲಿ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗುವುದೇ ?

## ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ESI ಆಸ್ಪತ್ರೆ

**ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ) –**

೫ (೪೨೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೆಲಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸೋಂಪುರ ಕೈಗಾರಿಕಾ (KIADB) ಪ್ರದೇಶದಲ್ಲಿ ಕಾರ್ಮಿಕರ ಉಪಯೋಗಕ್ಕಾಗಿ ESI ಆಸ್ಪತ್ರೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸೋಂಪುರ ಕೈಗಾರಿಕಾ ಪ್ರದೇಶಕ್ಕೆ ESI ಆಸ್ಪತ್ರೆಯನ್ನು ಇದುವರೆವಿಗೂ ಮಂಜೂರು ಮಾಡದೆ ಇರಲು ಕಾರಣಗಳೇನು ; (ವಿವರ ನೀಡುವುದು)

(ಇ) ಕಾರ್ಮಿಕರ ಹಿತದೃಷ್ಟಿಯಿಂದ ಯಾವ ಕಾಲಮಿತಿಯಲ್ಲಿ ಈ ಕೈಗಾರಿಕಾ ಪ್ರದೇಶದಲ್ಲಿ ESI ಆಸ್ಪತ್ರೆ ತೆರೆಯಲು ಮಂಜೂರಾತಿ ನೀಡಲಾಗುವುದು ? (ವಿವರ ನೀಡುವುದು)

## ಅನುದಾನ ಬಿಡುಗಡೆ

**ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) –**

೬ (೩೦೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ;

(ಆ) ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ ; (ತಾಲ್ಲೂಕುವಾರು ವಿವರ ಒದಗಿಸುವುದು)

(ಇ) ಇವುಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು ? (ವಿವರಗಳನ್ನು ಒದಗಿಸುವುದು)

## ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನ

**ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) –**

೭ (೪೩೪) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಮುಜರಾಯಿ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;

(ಇ) ಬೆಳಗಾವಿ ಜಿಲ್ಲೆ, ಹುಕ್ಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಯಾವ ಯಾವ ದೇವಸ್ಥಾನಗಳ ಅಭಿವೃದ್ಧಿ/ಜೀರ್ಣೋದ್ಧಾರಕ್ಕೆ ಅನುದಾನ ಕೋರಿ ಪ್ರಸ್ತಾವನೆಗಳು ಬಂದಿರುತ್ತವೆ ;

(ಈ) ಬಂದಿದ್ದಲ್ಲಿ, ಯಾವ ಯಾವ ದೇವಸ್ಥಾನಗಳ ಅಭಿವೃದ್ಧಿ / ಜೀರ್ಣೋದ್ಧಾರಕ್ಕೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ದೇವಸ್ಥಾನವಾರು ವಿವರ ನೀಡುವುದು)

(ಉ) ಬಾಕಿ ಉಳಿದಿರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು ; ಇದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಕಾಲಮಿತಿಯೇನು ?

## ಸಣ್ಣ ನೀರಾವರಿ ಇಲಾಖೆಗೆ ಬಿಡುಗಡೆಗೊಳಿಸಿದ ಅನುದಾನ

**ಶ್ರೀ ತಿಪ್ಪಾರೆಡ್ಡಿ ಜಿ.ಎಚ್. (ಚಿತ್ರದುರ್ಗ) –**

೮ (೧೧೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬–೧೭ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಚಿತ್ರದುರ್ಗ ಜಿಲ್ಲೆಯ ವಿವಿಧ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ ;

(ಆ) ಈ ಅವಧಿಯಲ್ಲಿ ಜಿಲ್ಲೆಯ ವಿವಿಧ ಕ್ರಿಯಾ ಯೋಜನೆಗಳಿಗೆ ಖರ್ಚು ಮಾಡಿದ ಹಣ ಎಷ್ಟು ; ಉಳಿದ ಹಣ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತೆಗೆದುಕೊಂಡ ಕಾಮಗಾರಿಗಳೆಷ್ಟು ? (ವಿವರ ನೀಡುವುದು)

## ಕೆರೆಗಳ ಅಭಿವೃದ್ಧಿ

**ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ) –**

೯ (೭೬೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಬರ ಪರಿಸ್ಥಿತಿಯಿಂದ ರೈತರ ಭೂಮಿಗೆ ಹಾಗೂ ಜಾನುವಾರುಗಳಿಗೆ ನೀರಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೩ ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯಿಂದ ಕೊಡಗು ಜಿಲ್ಲೆಯ ಕೆರೆಗಳ ಅಭಿವೃದ್ಧಿಗಾಗಿ ಎಷ್ಟು ಅನುದಾನ ಬಿಡುಗಡೆಗೊಳಿಸಿದೆ ; ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಅನುದಾನ ಮೀಸಲಿಟ್ಟಿದೆ ; (ಪೂರ್ಣ ವಿವರ ನೀಡುವುದು)

(ಇ) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನ ಆಲೂರು ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸಗುತ್ತಿ ಗ್ರಾಮದಲ್ಲಿರುವ ಏತ ನೀರಾವರಿ ಯೋಜನೆಯನ್ನು ಅಭಿವೃದ್ಧಿಪಡಿಸದೇ ಇರುವುದರಿಂದ ಈ ಭಾಗದ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಯೋಜನೆಯ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ? (ಪೂರ್ಣ ವಿವರ ನೀಡುವುದು)

## ಮೀನುಗಾರರ ಶ್ರೇಯೋಭಿವೃದ್ಧಿ

**ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ) –**

೧೦ (೪೨೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೀನುಗಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ ; (ಯೋಜನೆಗಳ ಪೂರ್ಣ ವಿವರ ಒದಗಿಸುವುದು)

(ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಯೋಜನೆ ಅಡಿಯಲ್ಲಿ ಎಷ್ಟೆಷ್ಟು ಅನುದಾನ ಹಂಚಿಕೆ ಮಾಡಿದೆ ; (ಯೋಜನಾವಾರು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಜಿಲ್ಲಾ ಹಾಗೂ ತಾಲ್ಲೂಕುವಾರು ಒದಗಿಸುವುದು)

(ಇ) ಮೀನುಗಾರರ ಶ್ರೇಯೋಭಿವೃದ್ಧಿಗಾಗಿ ರೂಪಿಸಿರುವ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳೇನು ? (ಪೂರ್ಣ ವಿವರ ಒದಗಿಸುವುದು)

## ಕಾಡಾನೆಗಳ ಹಾವಳಿ

**ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ) –**

೧೧ (೪೦೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಯಲು ಕಂದಕ ನಿರ್ಮಾಣ, ರೈಲ್ವೆ ಕಂಬಿಗಳ ಅಳವಡಿಕೆ ಯೋಜನೆ ಜಾರಿಯಲ್ಲಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಗಳನ್ನು ಜಾರಿಗೊಳಿಸಲು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಮೊತ್ತವೆಷ್ಟು ; (ವಿವರಗಳನ್ನು ಒದಗಿಸುವುದು)

(ಇ) ಎಷ್ಟು ಕಿ.ಮೀ. ಕಂದಕ ತೆಗೆಯಲಾಗಿದೆ ; ಎಷ್ಟು ಕಿ.ಮೀ. ರೈಲ್ವೆ ಕಂಬಿಗಳನ್ನು ಅಳವಡಿಸಲಾಗಿದೆ ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

(ಈ) ಕಾಮಗಾರಿಗಳನ್ನು ಇಲಾಖಾ ವತಿಯಿಂದಲೇ ನಡೆಸಲಾಗುತ್ತಿದೆಯೇ ಅಥವಾ ಗುತ್ತಿಗೆ ನೀಡಲಾಗುತ್ತಿದೆಯೇ ; ನಡೆಸುತ್ತಿರುವ ಕಾಮಗಾರಿಗಳು ಕಳಪೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು ? (ವಿವರಗಳನ್ನು ಒದಗಿಸುವುದು)

## ಗ್ರಾಮ ನ್ಯಾಯಾಲಯಗಳು

**ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) –**

೧೨ (೫೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಗ್ರಾಮ ನ್ಯಾಯಾಲಯಗಳನ್ನು ಯಾವಾಗ ಪ್ರಾರಂಭಿಸಲಾಯಿತು ; ಅವುಗಳ ಸಂಖ್ಯೆ ಎಷ್ಟು ; ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ ;

(ಆ) ಈ ಗ್ರಾಮ ನ್ಯಾಯಾಲಯಗಳಲ್ಲಿ ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ ಎಷ್ಟು ?

## ಸೀಡ್ ಬಾಲ್ ಯೋಜನೆ

**ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ) –**

೧೩ (೪೧೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆಯಲ್ಲಿ ಸೀಡ್‌ಬಾಲ್ ಯೋಜನೆ ಮೂಲಕ ಅರಣ್ಯ ಪ್ರದೇಶಗಳಲ್ಲಿ ಮರಗಳನ್ನು ಬೆಳೆಸುವ ಯೋಜನೆಯನ್ನು ಆರಂಭಿಸಲಾಗಿದೆಯೇ ;

(ಆ) ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಅರಣ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ; ಯಾವ ತಳಿಯ ಎಷ್ಟು ಪ್ರಮಾಣದ ಬೀಜಗಳನ್ನು ಸೇರಿಸಿ, ಸೀಡ್ ಬಾಲ್‌ಗಳನ್ನು ತಯಾರಿಸಲಾಗಿದೆ ;

(ಇ) ಗೊಬ್ಬಳಿ ಮತ್ತು ಗ್ಲಿಸಿರಿಡಿಯಾ ಮರಗಳನ್ನು ಬೆಳೆಸುವುದರಿಂದ ಸಸ್ಯ ಸಂಪತ್ತಿಗೆ ತೊಂದರೆಯಾಗುವುದಿಲ್ಲವೇ ; ಇವುಗಳನ್ನು ಕೈಬಿಡಲಾಗುವುದೇ ; ಮಾವಿನ ಓಟೆಗಳು, ಹಲಸು, ನೇರಳೆ, ಬೇಲ, ನೆಲ್ಲಿ ಮೊದಲಾದ ಹಣ್ಣಿನ ಬೀಜಗಳನ್ನು ಸಂಗ್ರಹಿಸಿ ರಾಜ್ಯದ ಎಲ್ಲಾ ಅರಣ್ಯ ಪ್ರದೇಶಗಳಲ್ಲಿ ಚೆಲ್ಲುವ ಮೂಲಕ, ಕಾಡಿನಲ್ಲಿ ನಾಟಿ ಮಾದರಿಯ ಹಣ್ಣಿನ ಮರಗಳನ್ನು ಬೆಳೆಸಿ, ಸಸ್ಯಾಹಾರಿ ಪ್ರಾಣಿಗಳಿಗೆ (ಕೋತಿ, ಆನೆ, ಜಿಂಕೆ, ಹಂದಿ, ಕರಡಿ ಇತ್ಯಾದಿ)

ಪಕ್ಷಿಗಳಿಗೆ ಹಣ್ಣುಗಳು ದೊರೆಯುವಂತೆ ಮಾಡಿ, ಅವುಗಳ ಆಹಾರದ ಕೊರತೆಯನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಈ) ಇದರಿಂದ ಈ ಪ್ರಾಣಿಗಳು ರೈತರ ಹೊಲಗದ್ದೆಗಳ ಕಡೆಗೆ ಬರುವುದನ್ನು ತಪ್ಪಿಸಬಹುದಲ್ಲವೇ ?

## ರಸ್ತೆ ಅಭಿವೃದ್ಧಿ

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ) –**

೧೪ (೧೯೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಲಸಂಪನ್ಮೂಲ ಇಲಾಖೆ ವ್ಯಾಪ್ತಿಗೊಳಪಡುವ ಮಸಗುಪ್ಪಿ ಕ್ರಾಸ್‌ನಿಂದ ಮೂಡಲಗಿವರೆಗೆ ಸುಮಾರು ೧೦ ಕಿ.ಮೀ. ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ರಸ್ತೆ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಈ ರಸ್ತೆಗಳ ದುರಸ್ತಿಗಾಗಿ ಕಳೆದ ಸಾಲಿನಲ್ಲಿ ಸರ್ಕಾರ ಅನುದಾನವನ್ನೇನಾದರೂ ನಿಗದಿಪಡಿಸಿ, ಬಿಡುಗಡೆ ಮಾಡಿದೆಯೇ ;

(ಈ) ಹಾಗಿದ್ದಲ್ಲಿ, ಇದುವರೆವಿಗೂ ರಸ್ತೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿರಲು ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಹಾಗಿಲ್ಲದಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಜಮೀನಿನ ಪೋಡಿ

**ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) –**

೧೫ (೧೮೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಕ್ರಮ ಸಕ್ರಮ ನಿಯಮದಡಿ ನಮೂನೆ ೫೦ ಮತ್ತು ೫೩ರಲ್ಲಿ ಮಂಜೂರಾದ ಜಮೀನುಗಳು ಪೋಡಿ ಆಗದೇ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದ್ದರೂ ಸಹ ನಿರ್ಲಕ್ಷ್ಯವಹಿಸಲು ಕಾರಣವೇನು ;

(ಆ) ಪೋಡಿ ಮುಕ್ತ ಗ್ರಾಮ ಯೋಜನೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈವರೆಗೆ ಎಷ್ಟು ಗ್ರಾಮಗಳ ಕೆಲಸ ಪೂರ್ಣಗೊಂಡಿದೆ ; ಅವುಗಳು ಯಾವುವು ; ಪ್ರಸ್ತುತ ಆಯ್ಕೆ ಮಾಡಿರುವ ಗ್ರಾಮಗಳು ಯಾವುವು ;

(ಇ) ನಮೂನೆ ೫೦ರಲ್ಲಿ ಮಂಜೂರಾಗಿರುವ ಎಷ್ಟು ಪ್ರಕರಣ ಪೋಡಿ ಮಾಡಲು ಬಾಕಿ ಇದೆ ; (ಜಿಲ್ಲಾವಾರು, ಗ್ರಾಮವಾರು ವಿವರ ನೀಡುವುದು)

(ಈ) ನಮೂನೆ ೫೩ರಲ್ಲಿ ಮಂಜೂರಾಗಿರುವ ಎಷ್ಟು ಪ್ರಕರಣಗಳು ಪೋಡಿ ಮಾಡಲು ಬಾಕಿ ಇವೆ ; ಬಾಕಿ ಇರಲು ಕಾರಣವೇನು ; (ಜಿಲ್ಲಾವಾರು, ಗ್ರಾಮವಾರು ವಿವರ ನೀಡುವುದು)

(ಉ) ಉಳಿದಿರುವ ಪ್ರಕರಣಗಳನ್ನು ವಿಲೇಗೊಳಿಸಲು ಎಷ್ಟು ಕಾಲಾವಕಾಶ ಬೇಕಾಗುವುದು ?

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾ.ಸೂ. 142 / ಪಿ5

List of Questions
for Oral Answers

Total No. of
Questions - 15

**LIST - 01**

# KARNATAKA LEGISLATIVE ASSEMBLY

## FOURTEENTH ASSEMBLY

## FOURTEENTH SESSION

## MONDAY 05th JUNE, 2017

---

### GROUP-A

1. Minister for Forest
2. Minister for Revenue
3. Minister for Major and Medium Irrigation.
4. Minister for Law, Parlimentary Affairs and Minor Irrigation
5. Minister for Labour
6. Minister of State for Textiles and Muzrai
7. Minister of State for Empowerment of Youth, Sports and Fisheries.

---

### IRRIGATION PROJECTS

**Sri Yashawantharayagouda Vittalagouda Patil (Indi)**

01 (390) Will the Minister for Major and Medium Irrigation be pleased to state:-

a) the particulars of developmental works which have been undertaken by the Water Resources Department under various projects and Head of Account in the limits of Indi Assembly Constituency since the last three years : (outlines of all projects be given)

b) the quantum of grant sanctioned by the Government for these projects; the present stage of said projects : (separate details be given)

c) the quantum of grant released so far to these projects; the time limit within which these works would be completed ;

d) the various irrigation projects which the Government has decided to undertake newly in the limits of Indi Assembly Constituency during current year ; the outlines of the same ? (details be given)

**SUPPLY OF SUB-STANDARD FODDER**

**Dr.Rafeeq Ahmed S (Tumkur City)**

02 (110) Will the Minister for Revenue be pleased to state:-

a) whether it has come to notice of the Government that a severe drought hits the State especially all the taluks of Tumkur district, as a result of this, the live-stock (cattle) are being died due to want of fodder ;

b) whether the Government is aware of the fact that the Goshalas opened by the Government are providing substandard filthy and dusty fodder ;

c) if so, the action that would be taken by the Government in this regard ? (information be furnished)

**BOREWELLS SANCTIONED UNDER SCP/TSP SCHEME**

**Sri Balakrishna C.N (Shravanabelagola)**

03 (555) Will the Minister for Law, Parliamentary Affairs and Minor Irrigation be pleased to state:-

a) the number of bore-wells sanctioned under SCP and TSP scheme by Minor Irrigation Department in Hassan district during the last three years; out of which, the number of bore-wells drilled and to be drilled : (assembly constituencywise information be furnished)

b) out of the bore wells which have been drilled under this scheme, the number of successful and unsuccessful bore wells; whether new bore-wells have been drilled in lieu of un-successful bore-wells ? (assembly constituencywise information be given)

**ROAD DEVELOPMENT**

**Sri Manappa D. Vajjal (Lingsugur)**

04 (550) Will the Minister for Major and Medium Irrigation be pleased to state:-

a) whether it has come to notice of the Government that the hardship is being caused to the movement of public on a road which is passing through the Kamaladinni, Navali, Rampur, Joolagudda, Hanumagudda, Khairavadgi villages coming under the limits of Rampura Lift Irrigation Project of Lingsugur Constituency;

b) if so, the measure would be taken for development of this road during the current year ?

**ESI HOSPITAL IN SOMPURA INDUSTRIAL AREA**

**Dr || K.Srinivasamurthy (Nelamangala)**

05 (422) Will the Minister for Labour be pleased to state:-

a) whether it has come to notice of the Government that there is no ESI Hospital for the convenience of labours in Sompura Industrial (KIADB) Area coming under the limits of Nelamangala Assembly Constituency;

b) the reasons for non-sanctioning of ESI Hospital to Sompur Industrial Area so far : (details be given)

c) the time limit within which the sanction would be accorded to open ESI Hospital in this industrial area in the interest of labours ? (details be given)

## RELEASE OF GRANT

**Sri Ravi C.T (Chikkamagalur)**

06 (305) Will the Minister for Law, Parliamentary Affairs and Minor Irrigation be pleased to state:-

a) the quantum of grant released by the Minor Irrigation Department to Chikkamagalur district since the last 3 years ;

b) the particulars of works executed out of said grant : (talukwise details be furnished)

c) out of them, the names of works completed and in-completed ? (details be furnished)

## GRANT FOR REJUVENATION OF TEMPLES

**Sri Umesh Vishwanath Katti (Hukkeri)**

07 (434) Will the Minister of State for Textiles and Muzrai be pleased to state:-

a) whether grant is being released by the Muzrai Department for rejuvenation of temples in the State ;

b) if so, the quantum of grant released to temples of the State during the last 3 years ;

c) the names of temples for which the proposals have been received seeking grant for development/rejuvenation of temples in the limits of Hukkeri Assembly Constituency of Belgaum district ;

d) if so, the quantum of grant released for development and rejuvenation of various temples ; (templewise details be furnished)

e) the time by when the grant would be released for rejuvenating of rest of the temples; the time limit stipulated by the Government for the same ?

## PARTICULARS OF FUND RELEASED BY THE MINOR IRRIGATION DEPARTMENT

**Sri Thippareddy G.H (Chitradurga)**

08 (113) Will the Minister for Law, Parliamentary Affairs and Minor Irrigation be pleased to state:-

a) the quantum of amount released by the Minor Irrigation Department to the various works of Chitradurga district during the year 2016-17 ;

b) the quantum of amount spent for various action plans of district during the said period; the quantum of amount remained pending ; (talukwise details be furnished)

c) the number of works undertaken in the limits of Chitradurga Assembly Constituency ? (details be furnished)

## DEVELOPMENT OF LAKES

**Sri Appachu Ranjan M.P (Madikeri)**

09 (765) Will the Minister for Law, Parliamentary Affairs and Minor Irrigation be pleased to state:-

a) whether the Government is aware of the fact that there is no water for land and live-stock of the farmers due to drought situation in Kodagu district ;

b) the quantum of grant released by Minor Irrigation Department for development of lakes in Kodagu district; the quantum of grant earmarked for various works ; (complete details be furnished)

c) whether the Government is aware of the fact that since the Lift Irrigation Project in Hosagutti village of Alur Siddapur grama panchayat of Somavarapet taluk in Kodagu district has not been developed, the farmers of this region are facing hardship; the measures taken by the Government for development of this project ? (complete details be furnished)

## UPLIFTMENT OF FISHERMEN

**Sri Ramesh Bandisiddegowda A.B (Srirangapatna)**

10 (420) Will the Minister of State for Youth Empowerment and Sports and Fisheries be pleased to state:-

a) the names of various schemes evolved by the Government for upliftment of fishermen in the State ; (complete details of schemes be furnished)

b) the quantum of grant allocated under this scheme during the last 3 years ; (schemewise, districtwise and talukwise details of grant released be furnished)

c) the criteria prescribed for selection of the beneficiaries in the scheme evolved for upliftment of fishermen ? (complete details be furnished)

## MENACE OF WILD ELEPHANTS

**Sri Bopaiah K.G (Virajpet)**

11(406) Will the Minister for Forest be pleased to state:-

a) whether a scheme on construction of trench and installation of railway bars is in existence to prevent the menace of wild elephants in Kodagu district;

b) if so, the quantum of amount released to implement these schemes since the last three years ; (details be furnished)

c) the length of k.ms of trench excavated; the length of k.ms railway bars installed ; (talukwise details be furnished)

d) whether works are being executed by the department itself or awarding for contract; whether the Government is aware of the fact that the works under progress are sub-standard; if so, the action taken in this regard ? (details be furnished)

## GRAMA NYAYALAYAS

**Sri Suresh Kumar S. (Rajajinagar)**

12 (54) Will the Minister for Law, Parliamentary and Minor Irrigation be pleased to state:-

a) when the Grama Nyayalayas have been commenced in the State; the number of such Nyayalayas; the name of places where the Grama Nyayalayas are being worked ;

b) the number of cases disposed off in these Grama Nyayalayas ?

**SEED BALL PROGRAMME**

**Sri Chaluvarayaswamy N (Nagamangala)**

13 (415) Will the Minister for Forest be pleased to state:-

a) whether the tree planting scheme in forest areas has been implemented through seed ball programme in Mandya district ;

b) the names of taluks and the extent of forest in which this scheme would be introduced in the said district; the quantum of various spices of seeds used in preparation of seed ball ;

c) whether it is not affect to the vegetation due to growing of Gobbali and Glisiridiya trees; whether these would be withdrawn; whether measures would be taken to solve food shortage of Herbivorous Animals (Monkey, Elephant, Deer, Pig, Bear etc.,) and Birds and make the fruit available to them by collecting and spreading of seeds such as Mango, Jack, Jamun, Bela, Nelly Seeds etc in forest areas of the State ;

d) whether, it might not be avoid these animals moving towards the farms/agricultural fields of farmers ?

**ROAD DEVELOPMENT**

**Sri Balachandra Laxmanrao Jarkiholi (Arabhavi)**

14 (195) Will the Minister for Major and Medium Irrigation be pleased to state:-

a) whether it has come to the notice of the Government that around10 km length of road from Masaguppi cross to Mudalagi coming under the limits of Water Resource Department is completely ruined ;

b) if so, the measures taken by the Government for repair of said road ;

c) whether any grant has been earmarked and released by the Government for repair of this road during the last year ;

d) if so, the reasons for not undertaking the repair works of this road so far ; (complete information be given)

e) if not, the difficulties of the Government to repair the said road ? (complete information be given)

## PODI OF LAND

**Sri Sunil Kumar V (Karkal)**

15 (189) Will the Minister for Revenue be pleased to state:-

a) the reason for negligence of the Government even though the public are facing hardship for not taking up the podi works of land granted in form 50 and 53 under Akrama-Sakrama in Dakshina Kannada and Udupi district ;

b) the number of villages in which the podi works have been completed under podi free village scheme in Dakshina Kannada and Udupi districts so far; the names of them; the names of villages selected for the same recently ;

c) the number of cases granted in form 50 remained pending for podi ; (districtwise, villagewise details be given)

d) the number of cases granted in form 53 remained pending for podi; the reason for pending ; (districtwise, villagewise details be given)

e) the time required for disposal of pending cases ?

**S. Murthy**
Secretary (I/c)
Karnataka Legislative Assembly

Govt Press, Vikasa Soudha, Bengaluru, P8, 1500 Copies